ಭರತನಾಟ್ಯವನ್ನೂ ಹೇಳಿಕೊಡುತ್ತಿದ್ದರು. ಭರತನಾಟ್ಯವನ್ನು ಅಭ್ಯಾಸ ಮಾಡಿದ್ದರಿಂದ ರಂಗಸ್ಥಳದಲ್ಲಿ ಇರುವ ಸ್ಥಾನಗಳನ್ನು ಅರಿತುಕೊಳ್ಳುವುದು, ಮುದ್ರೆಗಳ ಹಿನ್ನೆಲೆಗಳನ್ನು ಅರಿತುಕೊಳ್ಳುವುದು ಮುಂದಕ್ಕೆ ನನಗೆ ಸುಲಭವಾಯಿತು. ಯಕ್ಷಗಾನದ ಪ್ರವಾಹಕ್ಕೆ ನಾನು ಬಿದ್ದ ಬಗೆ ಹೀಗೆ. ಮುಂದಕ್ಕೆ ಧರ್ಮಸ್ಥಳ ಮೇಳವನ್ನು ಸೇರಿದ್ದೂ ಮತ್ತೊಂದು ಕಥೆ.

**◆ ನೀವು ದಕ್ಷಿಣ ಕನ್ನಡದಲ್ಲಷ್ಟೇ ಅಲ್ಲದೆ, ಉತ್ತರ ಕನ್ನಡ, ಶಿವಮೊಗ್ಗ, ಚಿಕ್ಕಮಗಳೂರು ಸೇರಿದಂತೆ ರಾಜ್ಯದಾದ್ಯಂತ ಯಕ್ಷಗಾನ ಪ್ರದರ್ಶನ ನೀಡಿದವರು. ಈ ತಿರುಗಾಟ ಆ ಕಾಲಕ್ಕೆ ಸುಲಭವೇನೂ ಆಗಿರಲಿಲ್ಲ ಅಲ್ಲವೇ?**

ಯಾವುದೂ ಯಾವಾಗಲೂ ಸುಲಭವಾಗಿ ಆಗುವುದಿಲ್ಲ. ಈ ಸಂದರ್ಭದಲ್ಲಿ ನೆನಪಾಗುವ ಒಂದು ವಿಚಾರ ಹೇಳುವೆ. ನನಗೆ ಉಪನಯನವಾದ ಮೇಲೆ ಉಡುಪಿಯ ಮಠಕ್ಕೆ ಹೋಗಲು ಒಬ್ಬರು ಸಲಹೆ ಮಾಡಿದರು. ಅಲ್ಲಿ ವೇದಪಾಠವೂ ಆಗುತ್ತದೆ, ಹಸಿವಿನ ಸಮಸ್ಯೆಯೂ ಬಗೆಹರಿಯುತ್ತದೆ ಎಂದು ಬಗೆದು ನಾನು ಉಡುಪಿಗೆ ಹೋಗಿ ಪೇಜಾವರ ಮಠ ಸೇರಿಕೊಂಡೆ. ಬೆಳಿಗ್ಗೆ ಮಧ್ವ ಸರೋವರದಲ್ಲಿ ಸ್ನಾನ ಮಾಡಿ, ಗಂಜಿ ಊಟ ಮಾಡಿ, ಪಾಠಕ್ಕೆ ಹಾಜರಾಗುವುದು. ಆಗೆಲ್ಲ ಹವ್ಯಕರಿಗೆ ವೇದಪಾಠ ಹೇಳುವ ವಾಡಿಕೆ ಅಲ್ಲಿ ಇರಲಿಲ್ಲವಂತೆ. ಆದ್ದರಿಂದ ಸಹಪಾಠಿಗಳು ನನ್ನನ್ನು ವಿಚಿತ್ರವಾಗಿ ನೋಡಿದ್ದಲ್ಲದೆ, ಗುರುಗಳು ಇವನಿಗೆ ಪಾಠ ಮಾಡಿದರೆ ನಾವು ತರಗತಿಗೆ ಹಾಜರಾಗುವುದಿಲ್ಲ ಎಂದು ಹೇಳಿದರು. ಗುರುಗಳು ಅನಿವಾರ್ಯವಾಗಿ ನನ್ನನ್ನು ಹೊರಡುವಂತೆ ಸೂಚಿಸಿದರು. ಸ್ವಾಮೀಜಿ ಬಳಿ ಹೇಳಿದ್ದರೆ ಏನಾದರೂ ತಿಳಿ ಹೇಳಿ ಪರಿಸ್ಥಿತಿ ಬಗೆಹರಿಸುತ್ತಿದ್ದರೋ ಏನೋ. ಹಾಗೆ ಮಾಡಿ ಅಲ್ಲಿಯೇ ಮುಂದುವರೆಯಲು ಮನಸ್ಸು ಒಪ್ಪಲಿಲ್ಲ. ಪೇಜಾವರ ವಿಶ್ವೇಶತೀರ್ಥ ಸ್ವಾಮೀಜಿ ಮುಕ್ತ ಮನಸ್ಸಿನವರಾಗಿದ್ದರು. ಕುರಿಯ ವಿಠಲ ಶಾಸ್ತ್ರಿಗಳು ಧರ್ಮಸ್ಥಳ ಮೇಳದ ಉಸ್ತುವಾರಿ ವಹಿಸಿಕೊಂಡಿದ್ದಾಗ, ಉಡುಪಿಯ ಪೇಜಾವರ ಮಠದಲ್ಲಿ ಯಕ್ಷಗಾನ ಪ್ರದರ್ಶನಕ್ಕೆ ಅವಕಾಶ ಕೊಡುವಂತೆ ಸ್ವಾಮೀಜಿ ಅವರನ್ನು ಕೋರಿದರು. ಯಕ್ಷಗಾನ ನೋಡುವುದು ಮಹಾಪಾಪ, ಧಾರ್ಮಿಕ ಅನುಷ್ಠಾನಗಳಿಗೆ ತೊಡಕಾಗುವ ಮೈಲಿಗೆಯ ವಿಚಾರ ಎಂಬ ಭಾವನೆ ಇದ್ದ ಕಾಲವದು. ಆದರೆ ಸ್ವಾಮೀಜಿ ಒಪ್ಪಿಗೆ ನೀಡಿದರು. ಮಠದವರು ಮಾತ್ರ ಪ್ರೇಕ್ಷಕರಾಗಿ ಅಂದಿನ ಆಟವನ್ನು ಪ್ರಸ್ತುತಪಡಿಸಲಾಯಿತು. ಕರ್ಮಠ ವಿಚಾರಗಳೇನಿದ್ದರೂ, ಸಕಾರಣದೊಂದಿಗೆ ಉದಾರವಾಗುತ್ತಾ ಹೋಗುವ ಬಗೆಗೆ ಇದೊಂದು ಉದಾಹರಣೆಯಿರಬಹುದು.

ಸ್ವಾಮೀಜಿ ಅವರೇ ಮಠದ ವ್ಯಾಪ್ತಿಯಲ್ಲಿ ಆಟ ಮಾಡಲು ಅವಕಾಶ ಕೊಟ್ಟದ್ದರಿಂದ ಇತರರೂ ಆಟವಾಡಿಸುವುದಕ್ಕೆ ಮುಂದೆ ಬಂದರು. ಹೀಗೆ ಮೇಳವು ಸೀಮಿತ ಪ್ರದೇಶವನ್ನು ದಾಟಿ ಮುಂದುವರೆಯುತ್ತಾ ಹೋಯಿತು. ಒಂದು ಕಡೆಯಿಂದ ಮತ್ತೊಂದು ಕಡೆಗೆ ಪ್ರಯಾಣಿಸುವುದಕ್ಕೆ ದಾರಿ ವೆಚ್ಚ ದುಬಾರಿಯಾಗುತ್ತದೆ ಎಂಬ ಕಾರಣಕ್ಕೆ ತಕ್ಕಮಟ್ಟಿಗಿನ ವ್ಯಾಪ್ತಿಯಲ್ಲಿ ಆಟಗಳನ್ನು ಗೊತ್ತು ಮಾಡಿಕೊಳ್ಳುತ್ತಿದ್ದರು. ಆ ಕಾಲಕ್ಕೆ ಒಂದು ಪ್ರದರ್ಶನಕ್ಕೆ ನಿಗದಿಯಾಗಿದ್ದ ವೀಳ್ಯ 60 ರೂಪಾಯಿ. ಇದರಲ್ಲಿ ಪ್ರದರ್ಶನ ಮತ್ತು ಕಲಾವಿದರ ಊಟ ಉಪಚಾರಗಳನ್ನು ನಿಭಾಯಿಸಬೇಕಿತ್ತು.

**◆ ಯಕ್ಷಗಾನದ ಜೊತೆಗೆ ನೀವು ಹರಿಕಥೆಯನ್ನೂ ಮಾಡಿದಿರಲ್ಲವೇ?**

ಹೌದು. ಹಿರಿಯ ಕಲಾವಿದ ಗೋಪಾಲಕೃಷ್ಣ ಶೇಣಿಯವರು, ಮಳೆಗಾಲದ ಸಂದರ್ಭದಲ್ಲಿ ಯಕ್ಷಗಾನ ಪ್ರಸ್ತುತಪಡಿಸಲು ಮುಂಬೈಗೆ ಹೋದಾಗ ಅಲ್ಲಿ ಆಗೀಗ ಹರಿಕಥೆ ಮಾಡುತ್ತಿದ್ದರು. ಅವರ ಹರಿಕಥೆಗೆ ರಾಮದಾಸ ಸಾಮಗರು ಹಾರ್ಮೋನಿಯಂ ಹಿಡಿಯುತ್ತಿದ್ದರು. ರಾಮದಾಸ ಸಾಮಗರ ಹರಿಕಥೆಗೆ ಶೇಣಿಯವರಿಗೆ ಹಾರ್ಮೋನಿಯಂ ನುಡಿಸಲು ಸಾಧ್ಯವಾಗುತ್ತಿರಲಿಲ್ಲ. ಆಗ ನಾನು ಹಾರ್ಮೋನಿಯಂನಲ್ಲಿ ಕುಳಿತೆ. ಹೀಗೆ ಹರಿಕಥೆ ಮಾಡುವ ವಿಧಾನವನ್ನು ಕಲಿತೆ. ನನ್ನನ್ನು ಅಲ್ಲೆಲ್ಲ 'ಮರಿ ಹರಿದಾಸ' ಎಂದು ತಮಾಷೆ ಮಾಡುತ್ತಿದ್ದರು. ಶೇಣಿಯವರೇ ಸ್ವತಃ ತಾಳಗಳನ್ನು ಕೊಟ್ಟು ಹರಿಕಥೆ ಮಾಡುವಂತೆ ನನಗೆ ಮಾರ್ಗದರ್ಶನ ಮಾಡಿದ್ದಲ್ಲದೆ, ಮುಂದುವರೆಸುವಂತೆ ಪ್ರೋತ್ಸಾಹ ಕೊಟ್ಟರು. ಇತ್ತೀಚೆಗೂ ನಾನು ಹರಿಕಥೆ ಮಾಡಿದ್ದೆ.